**ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳು : 5**

ಒಟ್ಟು ಐದು ತಳಿಗಳನ್ನು 2022–23 ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದೆ ಅವುಗಳ ವಿವರಗಳನ್ನು ಮುಂದೆ ನೀಡಲಾಗಿದೆ:

**2022–23 ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳ ವಿವರಗಳು**

| ಬೆಳೆಗಳು | ಸಂಖ್ಯೆ | ತಳಿ | ಶಿಫಾರಸ್ಸು ಮಾಡಿದ ವಲಯ |
|---|---|---|---|
| ರಾಗಿ | 1 | ಎಂ.ಎಲ್–322 | 5 |
| ಸಾಮೆ | 1 | ಜಿ.ಪಿ.ಯು.ಎಲ್.11 | 5 & 6 |
| ಬರಗು | 1 | ಜಿ.ಪಿ.ಯು.ಪಿ.32 | 5 & 6 |
| ಸೂರ್ಯಕಾಂತಿ | 1 | ಕೆ.ಬಿ.ಎಸ್.ಹೆಚ್–85 | 5 & 6 |
| ಹಲಸು | 1 | ಜಿ.ಕೆ.ವಿ.ಕೆ. ಕೆಂಪು ಹಲಸು | 5 |

**ರಾಗಿ: ಎಂ.ಎಲ್–322**

- ಅವಧಿ : 105–110 ದಿನಗಳು
- ಧಾನ್ಯದ ಇಳುವರಿ: ಖುಷ್ಕಿ: 10 – 12 ಕ್ವಿಂ/ಎಕರೆ
  ನೀರಾವರಿ: 15 – 20 ಕ್ವಿಂ/ಎಕರೆ
- ಮೇವಿನ ಇಳುವರಿ: 2.0–2.2 ಟನ್/ಎಕರೆ
- ಗಟ್ಟಿಯಾದ ಖಾಂಡವನ್ನು ಹೊಂದಿದ್ದು ತೆನೆ ನೆಲಕ್ಕೆ ಬೀಳುವುದಿಲ್ಲ
- ಹೆಚ್ಚಿನ ತೆಂಡೆ ಒಡೆಯುವಿಕೆ (6–7)
- ಬೆಂಕಿ ರೋಗ ನಿರೋಧಕ ಮತ್ತು ಬರ ಸಹಿಷ್ಣುತೆಯನ್ನು ಹೊಂದಿದೆ
- ಒಕ್ಕಣೆ ಮಾಡುವಾಗ ಕಡಿಮೆ ಹೊಟ್ಟಿನ ದೂಳನ್ನು ಹೊಂದಿರುತ್ತದೆ.
- ವಲಯ – 5ಕ್ಕೆ ಶಿಫಾರಸ್ಸು ಮಾಡಲಾಗಿದೆ



**ರಾಗಿ: ಎಂ.ಎಲ್–322**

**ಸಾಮೆ ತಳಿ: ಜಿ.ಪಿ.ಯು.ಎಲ್–11**

- ಅವಧಿ : 90 – 95 ದಿನಗಳು
- ಧಾನ್ಯ ಇಳುವರಿ: 6.8–8.1 ಕ್ವಿಂ/ಎಕರೆ
- ಮೇವಿನ ಇಳುವರಿ: 1.2–1.5 ಟನ್/ಎಕರೆ
- ಮುಂಗಾರು ಹಂಗಾಮಿಗೆ (ಜೂನ್–ಜುಲೈ) ಸೂಕ್ತವಾಗಿದೆ
- ಮಧ್ಯಮ ಸಾಂದ್ರತೆ ಮತ್ತು ಆರ್ಕಿಡ್ ಆಕಾರದ ತೆನೆಯನ್ನು ಹೊಂದಿದೆ
- ಬೀಜಗಳು ಅಂಡಾಕಾರವಿದ್ದು ಬೂದು ಬಣ್ಣದಿಂದ ಕೂಡಿವೆ
- ಎಲೆ ಅಂಗಮಾರಿ ರೋಗ ಮತ್ತು ತೆನೆ ಕಾಡಿಗೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ
- ವಲಯ –5 ಮತ್ತು 6ಕ್ಕೆ ಶಿಫಾರಸ್ಸು ಮಾಡಲಾಗಿದೆ



**ಸಾಮೆ ತಳಿ: ಜಿ.ಪಿ.ಯು.ಎಲ್–11**

**ಬರಗು ತಳಿ: ಜಿ.ಪಿ.ಯು.ಪಿ–32**

- ಅವಧಿ: 80–85 ದಿನಗಳು
- ಧಾನ್ಯ ಇಳುವರಿ: 7.2–8.1 ಕ್ವಿಂ/ಎಕರೆ
- ಮೇವಿನ ಇಳುವರಿ: 1.2–1.5 ಟನ್/ಎಕರೆ
- ಮುಂಗಾರು ಹಂಗಾಮಿಗೆ (ಜೂನ್–ಜುಲೈ) ಸೂಕ್ತವಾಗಿದೆ
- ಮಧ್ಯಮ ಸಾಂಧ್ರತೆ ಮತ್ತು ಡಿಫ್ಯೂಸ್ಡ್ ಆಕಾರದ ತೆನೆಯನ್ನು ಹೊಂದಿದೆ
- ಬೀಜಗಳು ಅಂಡಾಕಾರವಿದ್ದು ಹಳದಿ ಬಣ್ಣದಿಂದ ಕೂಡಿವೆ
- ತೆನೆ ಕಾಡಿಗೆ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ
- ವಲಯ – 5 ಮತ್ತು 6ಕ್ಕೆ ಶಿಫಾರಸ್ಸು ಮಾಡಲಾಗಿದೆ



**ಬರಗು ತಳಿ: ಜಿ.ಪಿ.ಯು.ಪಿ–32**

**ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–85**




**ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–85**

- ಅವಧಿ: 95–98 ದಿನಗಳು
- ಬೀಜ ಇಳುವರಿ: 8.9–10.5 ಕ್ವಿಂ/ಎ
- ತೈಲ ಇಳುವರಿ: 3.6–4.0 ಕ್ವಿಂ/ಎ
- ಮಧ್ಯಮ ಎತ್ತರದ ಗಿಡಗಳು
- ಗಟ್ಟಿಮುಟ್ಟಾದ ಕಾಂಡ ಮತ್ತು ನೆಟ್ಟಗಿನ ಸಸ್ಯ ಮಾದರಿ ಗುಂಪಿಗೆ ಸೇರಿರುತ್ತದೆ
- ಕೇದಿಗೆ ರೋಗಕ್ಕೆ ನಿರೋಧಕತೆ ಹೊಂದಿದೆ
- ವಲಯ – 5 ಮತ್ತು 6ಕ್ಕೆ ಶಿಫಾರಸ್ಸು ಮಾಡಲಾಗಿದೆ

## ಹಲಸು : ಜಿ.ಕೆ.ವಿ.ಕೆ ಕೆಂಪು ಹಲಸು

- ಬೇಗ ಫಸಲಿಗೆ ಬರುತ್ತದೆ (ನಾಟಿ ಮಾಡಿದ 3.5 ವರ್ಷಕ್ಕೆ)
- ಇಳುವರಿ (10 ವರ್ಷದ ಮರ): 120–150 ಹಣ್ಣುಗಳು/ಮರ/ವರ್ಷ
- ತೊಳೆಗಳ ತೂಕ : 600–700 ಗ್ರಾಂ / ಒಂದು ಕೆಜಿ ಹಣ್ಣಿಗೆ
- ತೊಳೆಗಳು: ಮಧ್ಯಮ ಗಾತ್ರದ (ಪ್ರತಿ ತೊಳೆ: 25–35 ಗ್ರಾಂ), ತಾಮ್ರ ಕಡುಗೆಂಪು ಬಣ್ಣದ ಉದ್ದವಾದ ತೊಳೆಗಳನ್ನು ಹೊಂದಿದೆ
- ಹಣ್ಣು: ಹಸಿರು ಸಿಪ್ಪೆಯ ಮಧ್ಯಮ ಗಾತ್ರದ (5.5–10 ಕೆ.ಜಿ/ಹಣ್ಣು) ಉದ್ದ ಆಕಾರದ ಹಣ್ಣುಗಳು ಪ್ರಾಥಮಿಕ ರಂಬೆಗಳಲ್ಲಿ ಬಿಡುತ್ತವೆ ಮತ್ತು ಚಿಕ್ಕದಾದ ದಿಂಡನ್ನು (<1.5 ಸೆಂ.ಮಿ ಮತ್ತು ಪ್ರತಿ ಕೆ.ಜಿ.ಗೆ 300–400 ಗ್ರಾಂ ಇರುತ್ತದೆ) ಹೊಂದಿದೆ
- ತೊಳೆಯು ತಿನ್ನಲು ಹೆಚ್ಚಿನ ಆದ್ಯತೆ ಹೊಂದಿದ್ದು ಮೌಲ್ಯವರ್ಧನೆಗೂ ಸೂಕ್ತವಾಗಿದೆ
- ಹಣ್ಣಿನ ಮತ್ತು ತೊಳೆಯ ಅನುಪಾತವು ಉತ್ತಮವಾಗಿದೆ (0.63)
- ತೊಳೆಗಳ ಸಕ್ಕರೆ ಅಂಶ: 25–30$^0$ ಬ್ರೀಕ್ಸ್
- ಬೀಜಗಳು ಚಿಕ್ಕದಾಗಿದೆ (ಇಪ್ಪತ್ತು ಬೀಜಗಳ ತೂಕವು ಸರಿಸುಮಾರು 100–130 ಗ್ರಾಂ)
- ಅಂಟು ರಹಿತವಾಗಿದ್ದು ರುಚಿಕರವಾದ ಕೆಂಪು ತೊಳೆಯನ್ನು ಹೊಂದಿರುವ ಕಾರಣ ವಾಣಿಜ್ಯ ಬೆಳೆಯಾಗಿ ಬೆಳೆಯಲು ಸೂಕ್ತವಾಗಿದೆ
- ಇತರೆ ಕೆಂಪು ತೊಳೆಯ ತಳಿಗಳಿಗಿಂತ ಅಧಿಕ ಟೊಟಲ್ ಕ್ಯಾರೊಟಿನಾಯ್ಡ್ (604.75 ಮೈಕ್ರೊ ಗ್ರಾಂ/100 ಗ್ರಾಂ), ಲೈಕೊಪಿನ್ (4.30 ಮೈಕ್ರೊ ಗ್ರಾಂ /100 ಗ್ರಾಂ), ಮತ್ತು ಲುಟೀನ್ (20.68 ಮೈಕ್ರೊ ಗ್ರಾಂ /100 ಗ್ರಾಂ) ಹೊಂದಿದೆ.
- ವಲಯ –5ಕ್ಕೆ ಶಿಫಾರಸ್ಸು ಮಾಡಲಾಗಿದೆ





ಹಲಸು : ಜಿ.ಕೆ.ವಿ.ಕೆ ಕೆಂಪು ಹಲಸು